ಇ) ಬಂದಿದೆ.

ಈ) ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಭೇಟಿ ಇತ್ತಾಗ ಸ್ಥಳೀಯ ಪರಿಸ್ಥಿತಿಯನ್ನು ಮನಗಂಡು ಈ ವರ್ಷದಿಂದಲೇ ಜೇವರ್ಗಿಯಲ್ಲಿ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲಾಗುವುದೆಂದು ತೀರ್ಮಾನಿಸಲಾಗಿದೆ.

ಶ್ರೀ ಧರ್ಮಸಿಂಗ್.—ಮಾನ್ಯ ಸಚಿವರು ಈ ವಿಚಾರದಲ್ಲಿ ಏನು ಬಹಳ ಒಳ್ಳೆಯ ಕ್ರಮವನ್ನು ತೆಗೆದುಕೊಂಡಿದ್ದಾರೆ, ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಆದರೆ ಇಲಾಖೆಯ ಅಧಿಕಾರಿಗಳು ವಿದ್ಯಾರ್ಥಿನಿ ನಿಲಯಕ್ಕೆ ಭೇಟಿ ಕೊಟ್ಟಾಗ ಕೇವಲ ೫–೬ ಜನರು ಮಾತ್ರ ಇದ್ದರು ಎಂದು ಹೇಳಿದ್ದಾರೆ. ಅದು ಸರಿಯಲ್ಲ. ೧೯ ಜನ ವಿದ್ಯಾರ್ಥಿನಿಯರು ಇದ್ದರು. ಇನ್ನೂ ಹೆಚ್ಚು ಜನ ವಿದ್ಯಾರ್ಥಿನಿಯರು ಬರುತ್ತಾರೆ. ಅಲ್ಲಿನ ಬಿ.ಡಿ.ಓ. ಮೆತ್ತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಹಳ್ಳಿಗಳಿಗೆ ಹೋಗಿ ಆ ಜನರಿಗೆ ಒದಗಿಸಿರುವ ಸೌಲಭ್ಯಗಳ ಬಗ್ಗೆ ಪ್ರಚಾರ ಮಾಡಬೇಕು, ತಿಳಿಸಿ ಹೇಳಬೇಕು. ಬಡವರು ಹಿಂದುಳಿದವರು ಅದ ಅವರಿಗೆ ಇರುವ ಸೌಕರ್ಯಗಳ ಬಗ್ಗೆ ಹೇಳಿದರೆ ಮನವರಿಕೆಯಾಗುತ್ತದೆ. ಹಾಗೆ, ಆ ರೀತಿಯಲ್ಲಿ ಯಾವುದೇ ಪ್ರಚಾರ ಕಾರ್ಯವನ್ನು ಯಾರೂ ಮಾಡಿಲ್ಲ. ನಮ್ಮಲ್ಲಿ ೧೪೬ ಹಳ್ಳಿಗಳು ಇವೆ. ಕನಿಷ್ಟ ಅಲ್ಲಿಂದ ೪೦–೫೦ ಮಕ್ಕಳು ಬಂದೇ ಬರುತ್ತಾರೆ. ನಾನೂ ಕೂಡ ಎಲ್ಲಾ ಕಡೆಗಳಲ್ಲಿ ಈ ವಿಷಯದ ಬಗ್ಗೆ ತಿಳುವಳಿಕೆ ಕೊಟ್ಟಿದ್ದೇನೆ. ಅಲ್ಲಿನ ಪರಿಸ್ಥಿತಿಯನ್ನು ಮನಗಂಡು ಮಾನ್ಯ ಮುಖ್ಯಮಂತ್ರಿಯವರೂ ಕೂಡ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸುವ ಬಗ್ಗೆ ಆಶ್ವಾಸನೆ ಕೊಟ್ಟಿದ್ದಾರೆ. ಇದೇ ವರ್ಷದಿಂದ ಅದನ್ನು ಪ್ರಾರಂಭ ಮಾಡುವುದಕ್ಕೆ ನಿರ್ದಿಷ್ಟವಾದ ಒಂದು ಆದೇಶವನ್ನು ಕೊಟ್ಟಿದ್ದಾರೆಯೋ ಇಲ್ಲವೋ ಎಂಬ ಬಗ್ಗೆ ಹೇಳಬೇಕು, ಹಾಗೆ ಇಲ್ಲವಾದಲ್ಲಿ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತದೆ.

ಶ್ರೀ ಜಿ. ಬಸವಣ್ಣಪ್ಪ.—ಆದೇಶವನ್ನು ಏನು ಕೊಟ್ಟಿದ್ದೇವೆ ಎಂದರೆ ಈಗ ಏನು ವಿದ್ಯಾರ್ಥಿ ನಿಲಯವನ್ನು ಟ್ರಾನ್ಸ್‌ಫರ್ ಮಾಡಿ ಆಜ್ಞೆಯನ್ನು ಏನು ಹೊರಡಿಸಿದ್ದೇವೆ, ಅದನ್ನು ರದ್ದುಪಾಡಿ ಜೇವರ್ಗಿಯಲ್ಲಿ ಆ ವಿದ್ಯಾರ್ಥಿನಿಲಯ ಇರತಕ್ಕದ್ದೆಂದೂ, ಅವಶ್ಯಕತೆ ಇದ್ದಲ್ಲಿ ಗುಲ್ಬರ್ಗದಲ್ಲಿಯೂ ಮತ್ತೊಂದು ಹೆಣ್ಣುಮಕ್ಕಳ ವಿದ್ಯಾರ್ಥಿನಿ ನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ಕೂಡ ನಾವು ತಯಾರಾಗಿದ್ದೇವೆ.

ಚಿಕ್ಕನಾಯಕನ ಹಳ್ಳಿ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸುವುದು

೬೭ (೯೧) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ದನಕರುಗಳಿಗೆಂದು ಮಾರ್ಚ್ ತಿಂಗಳಿನಲ್ಲಿ ತಂದ ಮೇವನ್ನು ಜೂನ್ ತಿಂಗಳಿನ ವರೆವಿಗೂ ನೀಡದಿದ್ದುದರಿಂದ ಅನೇಕ ದನಕರುಗಳು ಸಾವಿಗೀಡಾದುವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಮೇಲ್ಕಂಡ ವಿಷಯವನ್ನು ಜಿಲ್ಲಾ ಅಭಿವೃದ್ಧಿ ಸಮಿತಿಯಲ್ಲಿ ತಂದಾಗ್ಯೂ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಯಾವ ಕ್ರಮವನ್ನೂ ಕೈಗೊಳ್ಳದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ನಿರ್ಲಕ್ಷ್ಯದಿಂದ ಕರ್ತವ್ಯವನ್ನು ನಿರ್ವಹಿಸಿದ ಅಧಿಕಾರಿಗಳ ಮೇಲೆ ಕೂಡಲೇ ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಹೌದು.

ಆ) ಈ ಬಗ್ಗೆ ನಿರ್ದಿಷ್ಟವಾದ ಯಾವ ದೂರುಗಳೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಜಿಲ್ಲಾಭಿವೃದ್ಧಿ ಮಂಡಳಿಯ ಸಭೆಯಲ್ಲಿ ಮೇವಿನ ಕೊರತೆ ಇದ್ದ ಬಗ್ಗೆ ಚರ್ಚಿಸಿದ ನಂತರ ಅಗತ್ಯವಿರುವ ಕಡೆಗೆ ಮೇವನ್ನು ಸರಬರಾಜು ಮಾಡಿರುವುದಾಗಿ ಜಿಲ್ಲಾಧಿಕಾರಿಯವರು ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಈ) (ಇ)ಗೆ ಉತ್ತರ ನೀಡಿರುವುದರಿಂದ ಉದ್ಭವಿಸುವುದಿಲ್ಲ.

ಅಧ್ಯಕ್ಷರೇ, ಕೆಲವು ವಿವರಣೆಗಳನ್ನು ಕೊಟ್ಟರೆ ಮಾನ್ಯ ಸದಸ್ಯರಿಗೆ ಸಪ್ಲಿಮೆಂಟರಿ ಕೇಳುವ ಅವಶ್ಯಕತೆ ಬರಲಿಕ್ಕಿಲ್ಲ ಎಂದು ನಂಬಿದ್ದೇನೆ. ನಾವು ಚಿಕ್ಕನಾಯಕನಹಳ್ಳಿಯನ್ನು ಬರಗಾಲ ಪೀಡಿತ ಪ್ರದೇಶ ಎಂದು ಹೇಳಿ, ಸಾರಿದ್ದೇವೆ. ಅಲ್ಲಿನ ತಹಶೀಲ್ದಾರರಿಗೆ ಮೇವು ವಿತರಣೆ ಮಾಡಲಿಕ್ಕೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ಅವರು ರೈತರಿಗೆ ಸಹಾಯ ಮಾಡಿದ್ದಾರೆ. ಅದರ ವಿವರಗಳು ಈ ರೀತಿಯಲ್ಲಿವೆ. ಮಾರ್ಚ್ ತಿಂಗಳಿಂದ ಏಪ್ರಿಲ್ ತಿಂಗಳವರೆಗೆ, ಕಸಬಾ ಹೋಬಳಿಯಲ್ಲಿ ೨೯೦ ಜನರಿಗೆ, ಕಂದಿಕೆರೆ ಹೋಬಳಿಯಲ್ಲಿ ೬೨೪ ಜನರಿಗೆ, ಹಂದನಕೆರೆ ಹೋಬಳಿಯಲ್ಲಿ ೪೦೦ ಜನರಿಗೆ, ಹುಳಿಯಾರ ಹೋಬಳಿಯಲ್ಲಿ ೨೨೦ ಜನರಿಗೆ, ಒಟ್ಟು ನಲ್ಲಿ ೧,೫೩೪ ಜನರಿಗೆ ಈ ಸಹಾಯ ಲಭ್ಯವಾಗಿದೆ. ಹಾಗೆಯೇ ಕಸಬಾ ಹೋಬಳಿಯಲ್ಲಿ ೨೦ ಟನ್, ಹಂದನಕೆರೆ ಹೋಬಳಿಯಲ್ಲಿ ೨೫ ಟನ್, ಹುಳಿಯಾರು ಹೋಬಳಿಯಲ್ಲಿ ೪೦ ಟನ್ ಮೇವನ್ನು ವಿತರಣೆ ಮಾಡಿದ್ದೇವೆ. ಇಷ್ಟು ಪ್ರಯತ್ನವನ್ನು ನಾವು ಮಾಡಿದ್ದೇವೆ. ಮಾನ್ಯ ಸದಸ್ಯರು ಜಿಲ್ಲಾ ಮಂಡಳಿ ಸಭೆಯಲ್ಲಿ ಈ ಬಗ್ಗೆ ಚರ್ಚೆ ಮಾಡಿದ್ದು ದು ನಿಜ. ಇದಾದ ಮೇಲೆ, ಎ,ಸಿ. ಮತ್ತು ತಹಶೀಲ್ದಾರ್‌ರವರು ಪ್ರವಾಸ ಮಾಡಿ ಪುನಃ ಜೂನ್ ತಿಂಗಳಲ್ಲಿ ಕಸಬಾ ಹೋಬಳಿಯಲ್ಲಿ ೨೯೦ ಜನಕ್ಕೆ, ಹಂದಿಕೆರೆಯಲ್ಲಿ ೪೩೦ ಜನರಿಗೆ, ಹಂದನಕೆರೆಯಲ್ಲಿ ೪೭೦ ಜನರಿಗೆ, ಹೀಗೆ ೧,೧೫೫ ಜನರಿಗೆ ಸಹಾಯವನ್ನು ಮಾಡಿದ್ದಾರೆ. ಒಟ್ಟಿನಲ್ಲಿ ೯೫ ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ಅದರಲ್ಲಿ ೨೦ ಸಾವಿರ ರೂಪಾಯಿಗಳನ್ನು ರೈತರಿಗೆ ತಾವೇ ಮೇವು ತೆಗೆದುಕೊಳ್ಳುವುದಕ್ಕಾಗಿ ಸಾರಿಗೆ ಚಾರ್ಜ್ ಕೊಟ್ಟರು.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ಜನ ಜಾನುವಾರುಗಳನ್ನು ರಕ್ಷಣೆ ಮಾಡತಕ್ಕಂತಹ ದಿಸೆಯಲ್ಲಿ ಸರಕಾರದ ವಿಫಲತೆಯ ಬಗ್ಗೆ ತಮ್ಮ ಗಮನಕ್ಕೆ ಈ ವಿಚಾರವನ್ನು ತರುತ್ತೇನೆ. ಚಿಕ್ಕನಾಯಕನ ಹಳ್ಳಿಯನ್ನು ಬರಗಾಲ ಪೀಡಿತ ಪ್ರದೇಶ ಎಂದು ಒಪ್ಪಿಕೊಂಡಿದ್ದಾರೆ. ನನ್ನ ಕ್ಷೇತ್ರದಲ್ಲಿ ಜೂನ್ ೩೦ನೇ ತಾರೀಖು ಕ್ಷಾಮ ಪರಿಹಾರ ಕಾಮಗಾರಿಗಳನ್ನು ನಿಲ್ಲಿಸಿದ್ದಾರೆ. ಆನಂತರ ನಮ್ಮ ಒತ್ತಡ ಒತ್ತಾಯದ ಮೇರೆಗೆ ಹಾಗೂ ಪತ್ರಿಕೆಗಳಲ್ಲಿ ರೇಡಿಯೋದಲ್ಲಿ ಬಂದ ಸುದ್ದಿಗಳ ಪ್ರಕಾರ, ಏನೋ ಸ್ವಲ್ಪ ಹಂಚಿಕೆ ಮಾಡಿದರು. ಅಧಿಕಾರಿಗಳ ಕಾರ್ಯವು ಸಮರ್ಪಕವಾಗಿ ನಡೆದಿಲ್ಲ. ಈ ಚಿಕ್ಕನಾಯಕನಹಳ್ಳಿ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ತಾವು ಈಗಾಗಲೇ ಘೋಷಿಸಿರುವುದರಿಂದ ಅಲ್ಲಿ ದನಗಳಿಗೆ ಮೇವಿನ ಅವಶ್ಯಕತೆ ಇದೆ ಎನ್ನುವುದನ್ನು ನಾನು ಒತ್ತಿ ಹೇಳ ಬೇಕಾಗಿಲ್ಲ. ಆದಕ್ಕೋಸ್ಕರವಾಗಿ ತಾವು ದನಗಳಿಗೆ ಮೇವನ್ನು ಸಕಾಲದಲ್ಲಿ ಹಂಚಿದ್ದರೆ ಎಷ್ಟೋ ದನಗಳಿಗೆ ಅನುಕೂಲವಾಗುತ್ತಿತ್ತು. ಅಲ್ಲಿ ದನಗಳಿಗೆ ಮೇವು ಸಕಾಲದಲ್ಲಿ ಸಿಗದೇ ಇದ್ದುದರಿಂದ ಎಷ್ಟೋ ದನಗಳು ಅಸು ನೀಗಿವೆ. ಆದುದರಿಂದ ನಾನು ಹೇಳುವುದೇನೆಂದರೆ ಇದರ ಬಗ್ಗೆ ಅಧಿಕಾರಿಗಳು ತಮ್ಮ ಕರ್ತವ್ಯದಲ್ಲಿ ಲೋಪಮಾಡಿರುವುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ತಾವೇ ಎಲ್ಲವನ್ನೂ ನೋಡುವುದಕ್ಕಾಗುವುದಿಲ್ಲ. ಅಧಿಕಾರಿಗಳು ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸದೇ ಇದ್ದರೆ ತಮಗೆ ಕೆಟ್ಟ ಹೆಸರು ಬರುತ್ತದೆ.

ಅಧ್ಯಕ್ಷರು.—ತಾವು ಭಾಷಣ ಮಾಡಬೇಡಿ, ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಬಿ. ಲಕ್ಕಪ್ಪ.—ಸರಿಯಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸದೇ ಇದ್ದ ಅಧಿಕಾರಿಗಳ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್ ಆರ್. ಬೊಮ್ಮಾಯಿ.—ಅವರು ಒತ್ತಾಯ ಮಾಡಿದ ಮೇಲೆ ಅಧಿಕಾರಿಗಳು ಅಲ್ಲಿಗೆ ಹೋಗಿ ಕೆಲಸ ಮಾಡಿದ್ದಾರೆ. ಅಲ್ಲಿ ಇನ್ನೂ ಹೆಚ್ಚು ಅವಶ್ಯಕವಾಗಿ ಕೆಲಸ ಮಾಡಬೇಕಾಗಿದೆ. ಮಳೆ ಬಂದಿಲ್ಲ. ಅಲ್ಲಿ ದನಗಳಿಗೆ ಮೇವನ್ನು ಇನ್ನೂ ಹೆಚ್ಚಾಗಿ ಹಂಚುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ತಾವು ಹೇಳಿದುದರ ಬಗ್ಗೆಯೂ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು.—ಶ್ರೀ ಟಿ. ಎಸ್. ಮಣಿ ಅವರ ಪ್ರಶ್ನೆಯನ್ನು ಶ್ರೀ ಆರ್. ವೆಂಕಟರಾಮಯ್ಯ ನವರು ಕೇಳಿಹುದು.